ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 02-04-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕನ್ನಡ ಕಲಿಯಿರಿ ಸೈಕಲ್ ಜಾಥಾ:<br>ಉದ್ಘಾಟನೆ:<br>ಬಿ.ಎನ್. ವಿಜಯಕುಮಾರ್, ಶಾಸಕರು, ಜಯನಗರ<br>ಅಧ್ಯಕ್ಷತೆ:<br>ಎನ್.ಎ. ಹ್ಯಾರಿಸ್, ಶಾಸಕರು, ಶಾಂತಿ ನಗರ | 03-04-2016 ಭಾನುವಾರ ಬೆಳಗ್ಗೆ 7-45 ಗಂಟೆಗೆ | ಮಾಧವನ್ ಪಾರ್ಕ್, ಜಯನಗರ, ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಉಚ್ಚ ನ್ಯಾಯಾಲಯದಲ್ಲಿ 29 ಲಾ ಕ್ಲರ್ಕ್, ರಿಸರ್ಚ್ ಅಸಿಸ್ಟೆಂಟ್ಸ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 2 (ಕರ್ನಾಟಕ ವಾರ್ತೆ)

ಪ್ರತಿಭಾವಂತ ಕಾನೂನು ಪದವೀಧರರಿಗೆ, ಕಾನೂನು ವೃತ್ತಿಗೆ ಸೇರ್ಪಡೆ, ಕಾನೂನು ತಕರಾರು ಅರ್ಜಿಗಳ ವಿವಿಧ ರೂಪಗಳು, ಕಾನೂನಿನ ವಿವಿಧ ಶಾಖೆಗಳು ಮತ್ತು ನ್ಯಾಯಾಲಯದ ಕಾರ್ಯವಿಧಾನಗಳ ಪರಿಚಯ ಮಾಡಿಕೊಡುವ ಸಲುವಾಗಿ ಹಾಗೂ ನವ ಕಾನೂನು ಪದವೀಧರರಿಗೆ

ಉತ್ತೇಜನ ನೀಡುವ ಸಲುವಾಗಿ, ಕಾನೂನು ಪದವಿ (ಕನಿಷ್ಠ ಶೇ 50 ಅಂಕಗಳು) ಹೊಂದಿರುವಂತಹ ಆಸಕ್ತ ಅಭ್ಯರ್ಥಿಗಳಿಂದ 29 ಲಾ ಕ್ಲರ್ಕ್ ಮತ್ತು ರೀಸರ್ಚ್ ಅಸಿಸ್ಟೆಂಟ್ಸ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ದಿನಾಂಕ: 01-01-2014 ರಂದು ಅಥವಾ ನಂತರ ಕರ್ನಾಟಕ ಸ್ಟೇಟ್ ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು ಮತ್ತು ಅರ್ಜಿದಾರರ ವಯಸ್ಸು ಅರ್ಜಿ ಸಲ್ಲಿಸುವ ಕೊನೆಯ ದಿನದಂದು 30 ವರ್ಷಗಳನ್ನು ಮೀರಿರಬಾರದು. ಭರ್ತಿ ಮಾಡಿರುವ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 30ನೇ ಏಪ್ರಿಲ್ 2016.

ಸವಿಸ್ತಾರವಾದ ಅಧಿಸೂಚನೆಗೆ www.karnatakajudiciary.kar.nic.in ಗೆ ಭೇಟಿ ನೀಡಿ ಎಂದು ರಾಜ್ಯ ಉಚ್ಚ ನ್ಯಾಯಾಲಯದ ಮಹಾವಿಲೇಖನಾಧಿಕಾರಿಗಳಾದ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ತಿಳಿಸಿದ್ದಾರೆ,.

ಬಾಬು:ಜಿಪಿಆರ್

## ಸಂಸದೀಯ ಕಾರ್ಯದರ್ಶಿಗಳ ಪ್ರವಾಸ

ಬೆಂಗಳೂರು, ಏಪ್ರಿಲ್ 2 (ಕರ್ನಾಟಕ ವಾರ್ತೆ)

ರಾಜ್ಯ ಕಂದಾಯ ಸಚಿವರ ಸಂಸದೀಯ ಕಾರ್ಯದರ್ಶಿ ಪ್ರಮೋದ್ ಮಧ್ವರಾಜ್ ಅವರು ಏಪ್ರಿಲ್ 4 ಮತ್ತು 5 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.

ಬಾಬು:ಜಿಪಿಆರ್

## ಅವಧಿ ವಿಸ್ತರಣೆ

ಬೆಂಗಳೂರು, ಏಪ್ರಿಲ್ 2 (ಕರ್ನಾಟಕ ವಾರ್ತೆ)

ಕರ್ನಾಟಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ 2013 ನೇ ಸಾಲಿನಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಸ್ವೀಕೃತಿ ಕೇಂದ್ರಕ್ಕೆ ಸಲ್ಲಿಸುವ ಅವಧಿಯನ್ನು ಏಪ್ರಿಲ್ 15 ರವರೆಗೆ ವಿಸ್ತರಿಸಲಾಗಿದೆ..

ಬಾಬು:ಜಿಪಿಆರ್

## HIGH COURT INVITED APPLICATION FOR 29 POSTS OF LAW CLERK-CUM-RESEARCH ASSISTANTS

Bengaluru, April 2 (Karnataka Information)

With a view to encourage brilliant and talented Law Graduates to join the Law Profession and to give them exposure to various facts of litigation and branches of law and famililarity with Court

procedures, applications have been invited for appointment to 29 posts of Law Clerk-cum-Research Assistants from eligible candidates who possess Law Degree with minimum of 50% marks, enrolled as an advance with the Karnataka State Bar Council on or after 01-04-2014 and whose age a less than 30 years as on the last date of application.

The last date fixed for receipt of applications is 30th April 2016. For detailed notification visit www.karnatakajudiciary.kar.nic.in. According to Registrar general Jurisdiction John Michael Cunha.

babu:gpr

## ರಾಜ್ಯ ಸರ್ಕಾರದಿಂದ ನಿವೃತ್ತ ಪೊಲೀಸ್ ಕ್ಷೇಮಾಭಿವೃದ್ಧಿ ನಿಧಿಗೆ ರೂ. ಹತ್ತು ಕೋಟಿ - ಮುಖ್ಯಮಂತ್ರಿ ಪ್ರಕಟಣೆ

ಬೆಂಗಳೂರು, ಏಪ್ರಿಲ್- 2: (ಕರ್ನಾಟಕ ವಾರ್ತೆ)

ಅಪರಾಧಗಳು ನಡೆದ ನಂತರ ಅಪರಾಧಿಗಳನ್ನು ಕಂಡುಹಿಡಿಯುವುದಕ್ಕಿಂತ ಅಪರಾಧಗಳು ನಡೆಯದಂತೆ ಮುನ್ನೆಚ್ಚರಿಕೆಯಿಂದ, ಅತ್ಯಂತ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಪೊಲೀಸ್ ಇಲಾಖೆಯ ಮುಖ್ಯ ಕರ್ತವ್ಯ ಎಂದು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಬೆಂಗಳೂರಿನ ಕೋರಮಂಗಲದ ಕೆ.ಎಸ್.ಆರ್.ಪಿ. ಪೆರೇಡ್ ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು,. ಧ್ವಜ ವಂದನೆ ಸ್ವೀಕರಿಸಿ ಮಾತನಾಡುತ್ತಾ ಪ್ರತಿ ವರ್ಷ ಏಪ್ರಿಲ್ 2 ರಂದು ಪೊಲೀಸ್ ಧ್ವಜಾ ದಿನಾಚರಣೆಯನ್ನು ಆಚರಿಸುತ್ತೇವೆ. ಇದು ಪೊಲೀಸ್ ಇಲಾಖೆಗೆ ಮಹತ್ವದ ದಿನ, 1965 ರಲ್ಲಿ ಪೊಲೀಸ್ ಕಾಯ್ದೆ ಜಾರಿಯಾಯಿತು. ಈ ದಿನವನ್ನು ಪೊಲೀಸ್ ಕಲ್ಯಾಣ ದಿನ ಎಂದು ಸಹ ಕರೆಯುತ್ತೇವೆ. ಪೊಲೀಸರು ದಿನದ 24 ಘಂಟೆಗಳು, ವರ್ಷದ 365 ದಿನಗಳು ಬಿಡುವಿಲ್ಲದ ಕೆಲಸ ಮಾಡಬೇಕಾಗುತ್ತದೆ. ಅವರು ಹಬ್ಬ - ಹರಿದಿನ ಯಾವುದೇ ಸಂದರ್ಭದಲ್ಲಿ ಕುಟುಂಬದವರೊಡನೆ ಇರಲು ಸಾಧ್ಯವಾಗುವುದಿಲ್ಲ. ಅವರ ಸೇವೆ ಬಹಳ ಕ್ಲಿಷ್ಟಕರವಾಗಿದ್ದು, ಜೀವಕ್ಕೆ ಅಪಾಯ ತರುವಂತಹದ್ದಾಗಿರುತ್ತದೆ ಆದರೂ ಕಾನೂನು ಸುವ್ಯವಸ್ಥೆ ಕಾಪಾಡಲು, ಸಮಾಜದಲ್ಲಿ

ಶಾಂತಿ, ನೆಮ್ಮದಿ ನೆಲೆಸಲು ಅವರು ತಮ್ಮ ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡಬೇಕಾಗುತ್ತದೆ ಎಂದರು.

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳು ಸರಿರಾತ್ರಿಯಲ್ಲಿ ಒಬ್ಬರೇ ಹೊರಗೆ ಓಡಾಡುವಂತಾಗಬೇಕು, ಅದು ನಿಜವಾದ ಸ್ವಾತಂತ್ರ್ಯ ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಇದನ್ನು ನೆನಪಿನಲ್ಲಿಟ್ಟುಕೊಂಡು ಎಲ್ಲೂ ಎಚ್ಚರ ತಪ್ಪದೆ ಪೊಲೀಸ್ ಇಲಾಖೆ ಕೆಲಸ ಮಾಡಬೇಕಾಗುತ್ತದೆ. ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಮೈಯೆಲ್ಲಾ ಕಣ್ಣಾಗಿ, ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಣೆ ಮಾಡಿಕೊಂಡು ಕೆಲಸ ನಿರ್ವಹಿಸಬೇಕು. ನಾಡಿಗಾಗಿ, ನಾಡಿನ ಜನತೆಗಾಗಿ ನಿಷ್ಠೆಯಿಂದ ದುಡಿಯಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಪೊಲೀಸ್ ಇಲಾಖೆಯಲ್ಲಿ ಶೇ. 13 ರಷ್ಟು ಅಧಿಕಾರಿಗಳು, ಶೇ. 83 ರಷ್ಟು ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದೆ. ಸುಮಾರು 50 ಸಾವಿರ ನಿವೃತ್ತ ಪೊಲೀಸ್ ಇದ್ದಾರೆ. ಸೇವೆಯಲ್ಲಿರುವವರಿಗೆ ಸರ್ಕಾರ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ನಿವೃತ್ತ ಪೊಲೀಸ್ ಅಧಿಕಾರಿ/ಸಿಬ್ಬಂದಿಗೆ ಯಾವುದೇ ಸೌಲಭ್ಯ ಇರುವುದಿಲ್ಲ. ನಿವೃತ್ತ ಪೊಲೀಸ್ ಕಲ್ಯಾಣ ನಿಧಿಯ ಸಹಾಯಧನವನ್ನು ಹಿಂದೆ ಇದ್ದ ರೂ. 25 ಸಾವಿರದಿಂದ ರೂ. 50 ಸಾವಿರಕ್ಕೆ ಏರಿಸಲಾಗಿದೆ. ನಿವೃತ್ತಿಯ ಇಳಿವಯಸ್ಸಿನಲ್ಲಿ ಕಾಡುವ ಅನೇಕ ಆರೋಗ್ಯ ಸಮಸ್ಯೆಗಳಿಗೆ ಮತ್ತಿತರ ಅವರ ಕ್ಷೇಮಾಭಿವೃದ್ಧಿಗಾಗಿ ರೂ. 10 ಕೋಟಿ ಗಳನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಕೋರಿಕೆಯ ಮೇಲೆ ಸಹಾಯವಾಗಿ ನೀಡಲು ಸಂತೋಷದಿಂದ ಒಪ್ಪಿದ್ದೇನೆ. ಅದರಿಂದ ಬರುವ ಬಡ್ಡಿ ಹಣದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ / ಸಿಬ್ಬಂದಿಯ ಆರೋಗ್ಯ ರಕ್ಷಣೆ ಮಾಡಲು ಸಹಾಯವಾಗುತ್ತದೆ ಎಂದರು.

ಪೊಲೀಸ್ ಇಲಾಖೆ ವೃತ್ತಿನಿರತರಾಗಬೇಕು. ಅದಕ್ಕೆ ಬೇಕಾದ ತರಬೇತಿ ಪಡೆಯುವಂತಾಗಬೇಕು. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಅಪರಾಧಗಳು ಸಂಪೂರ್ಣ ತಡೆಯಬಹುದು ಎಂದು ನಾನು ಹೇಳುವುದಿಲ್ಲ ಆದರೆ ನಿಷ್ಠೆಯಿಂದ ಕೆಲಸ ಮಾಡಬೇಕು. ದೇಶದಲ್ಲಿ ಇಂಡಿಯನ್ ಪೀನಲ್ ಕೋಡ್ ನೆಕಾಲೆ ಅವರಿಂದ ರಚನೆಯಾಗಿದೆ. ಆ ನಂತರ ಅನೇಕ ಕಾಯ್ದೆಗಳು ಬಂದಿವೆ. ಅವೆಲ್ಲ ಸಂಪೂರ್ಣವಾಗಿ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಅಪರಾಧ ತಡೆಯುವಲ್ಲಿ ನಮ್ಮ ಪ್ರಯತ್ನ ಇರಬೇಕು. ಅಪರಾಧ ನಡೆಯುವುದಕ್ಕಿಂದ ಮುಂಚೆ ತಡೆಯುವುದು ಬಹಳ ಮುಖ್ಯ. ಬೆಂಗಳೂರಿನಲ್ಲಿ ಸರಗಳ್ಳತನ ಹೆಚ್ಚಾಗಿದೆ ಎಂದು ತಿಳಿದುಬಂದಿದೆ. ಅದು ಆಗದಂತೆ ತಡೆಯುವುದು ಮುಖ್ಯ. ಎಂದು ಹೇಳಿದರು.

ಕರ್ನಾಟಕದ ಪೊಲೀಸ್ ಇಲಾಖೆಗೆ ಅಂತಹ ಸಾಮರ್ಥ್ಯ ಇದೆ. ಕರ್ನಾಟಕದ ಪೊಲೀಸ್ ಗೆ ಒಳ್ಳೆ ಇತಿಹಾಸ, ಪರಂಪರೆ, ಒಳ್ಳೆಯ ಹೆಸರು ಇದೆ. ಇಡೀ ರಾಷ್ಟ್ರದಲ್ಲೇ ಮುಂಚೂಣಿಗೆ ಹೋಗುವಂತಹ ಕೆಲಸ ಮಾಡಬೇಕು. ಅದಕ್ಕೆ ಮೇಲಿನಿಂದ ಕೆಳ ಹಂತದ

ಅಧಿಕಾರಿ/ಸಿಬ್ಬಂದಿಯವರು ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಇವತ್ತು ಯಾರು ಯಾರು ಒಳ್ಳೆಯ ಕೆಲಸ ಮಾಡಿದ್ದಾರೋ ಅವರನ್ನು ಗುರುತಿಸಿ ಸರ್ಕಾರ ಅವರಿಗೆ 2015 ನೇ ಸಾಲಿನ ಚಿನ್ನದ ಪದಕ ನೀಡಿದೆ. ಪದಕ ಪಡೆದ ಎಲ್ಲಾ ಅಧಿಕಾರಿ/ ಸಿಬ್ಬಂಧಿಗೂ ಅಭಿನಂದನೆಗಳು. ಅಷ್ಟು ಒಳ್ಳೆಯ ಕೆಲಸ ಮಾಡಬೇಕೆಂದರೆ ಒತ್ತಡವಿಲ್ಲದೆ ಉತ್ತಮ ಕೆಲಸ ನಿರ್ವಹಿಸಲು ಅವರ ಕುಟುಂಬ ಬಹಳ ಮುಖ್ಯ ಅವರಿಗೂ ನನ್ನ ಅಭಿನಂದನೆಗಳು. ಅದರ ಶ್ರೇಯಸ್ಸು ಅವರಿಗೂ ಸಲ್ಲುತ್ತದೆ. ಚಿನ್ನದ ಪದಕ ಪಡೆದವರ ಕೆಲಸ ಬೇರೆಯವರಿಗೆ ಸ್ಫೂರ್ತಿಯಾಗುತ್ತದೆ. ಎಲ್ಲರೂ ದಕ್ಷತೆಯಿಂದ ಕೆಲಸ ಮಾಡಿ ಕರ್ನಾಟಕದಲ್ಲಿ ನೆಮ್ಮದಿ ನೆಲೆಸುವಂತಾಗಬೇಕು. ಎಲ್ಲಾ ಒಳ್ಳೆಯ ಕೆಲಸಗಳಿಗೂ ಸರ್ಕಾರದ ಬೆಂಬಲ ಸದಾ ಇರುತ್ತದೆ. ನಮ್ಮ ಸರ್ಕಾರದಲ್ಲಿ ಪೊಲೀಸ್ ಇಲಾಖೆ ಮುಕ್ತವಾಗಿ ಕೆಲಸ ಮಾಡುವ ವಾತಾವರಣ ನಿರ್ಮಾಣ ಮಾಡಲು ಪ್ರಯತ್ನ ನಡೆದಿದೆ. ಕಾನೂನು ಪಾಲನೆ, ಸಮಾಜದ ನೆಮ್ಮದಿ ಹಾಳು ಮಾಡುವ ಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಬಲಿ ಹಾಕುವ ಕೆಲಸ ಆಗಬೇಕು. ಸಮಾಜ ಘಾತುಕ ಶಕ್ತಿಗಳನ್ನು ದಮನ ಮಾಡಬೇಕು. ಆಗ ಮಾತ್ರ ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲೆಸಲು ಸಾಧ್ಯ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಗೃಹ ಸಚಿವ ಡಾ॥ ಜಿ. ಪರಮೇಶ್ವರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೃಹ ಸಚಿವರ ಸಲಹೆಗಾರ ಕೆಂಪಯ್ಯ, ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಲತಾ ಕೃಷ್ಣರಾವ್ ಇನ್ನಿತರ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕ ಓಂ ಪ್ರಕಾಶ್ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿದರು. 2015 ನೇ ಸಾಲಿನ ಚಿನ್ನದ ಪದಕವನ್ನು ಮುಖ್ಯಮಂತ್ರಿಗಳು ಪ್ರದಾನ ಮಾಡಿದರು.

## ಸಂಪುಟ ವಿಸ್ತರಣೆ:

ಈ ಸಂದರ್ಭದಲ್ಲಿ ಪತ್ರಕರ್ತರೊಡನೆ ಮಾಡನಾಡಿದ ಮುಖ್ಯಮಂತ್ರಿಗಳು ಬಹುನಿರೀಕ್ಷಿತ ಸಚಿವ ಸಂಪುಟ ಈ ತಿಂಗಳ ಅಂತ್ಯದಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಬಾಬು:ಪಿಎಸ್ಐ:ಜಿಪಿಆರ್.

## ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ಏಪ್ರಿಲ್ 2 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:03-04-2016ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್

ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಗ್ಗೆ 06.00 ಗಂಟೆಯಿಂದ ಬೆಳಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ **"ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ ಶ್ರೀ ಸದಾನಂದ ಎಲ್ ಕೊಣ್ಣೂರ ಮತ್ತು ತಂಡ, ಬಾಗಲಕೋಟೆ ಜಿಲ್ಲೆರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ **"ಉದ್ಯಾನವನದಲ್ಲಿ ಸಂಧ್ಯಾರಾಗ"** ಎಂಬ ಶೀರ್ಷಿಕೆಯಡಿ ಶ್ರೀಮತಿ ನೇತ್ರಾವತಿ ಪಿ. ಎಂ. ನಟೇಶನ್ ಮತ್ತು ತಂಡ, ಬೆಂಗಳೂರು ಜಿಲ್ಲೆರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ ಅಣಬೆ ಈಡಿಣುಣ, ಆಡಿಥ ಈಡಿಣುಣ ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ-ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
7. ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
8. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### ಐ.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- **ಬೆಳಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಅಭಿಷೇಕ್ ಎನ್ ಎಸ್ ರವರಿಂದ ಕರ್ನಾಟಕ ಸಂಗೀತ, ಶ್ರೀಕಾಂತ ರಾಧಾಕೃಷ್ಣನ್ ವೈಲಿನ್ ವಾದನ ಮತ್ತು ಸಂಜೀವ್ ಪಲಮಂದ ರವರಿಂದ ಮೃದಂಗಂ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಗ್ಗೆ 08.00 ಗಂಟೆಯಿಂದ 09.00 ಗಂಟೆಯವರೆಗೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ 1ನೇ ಬ್ಯಾಂಡ್ ಕಲಾವಿದರ ವತಿಯಿಂದ ಪೊಲೀಸ್ ಬ್ಯಾಂಡ್ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಗ್ಗೆ 09.00 ಗಂಟೆಯಿಂದ 10.00 ಗಂಟೆಯವರೆಗೆ ವಾಣಿ ಸ್ಕೂಲ್, ಮಾಗಡಿ ರಸ್ತೆ ಬೆಂಗಳೂರು ರವರಿಂದ ಭಾರತ ದೇಶದ ವಿವಿಧ ರಾಜ್ಯಗಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

### ಐಐ.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ವಿದ್ಯಾರಣ್ಯ ಸಂಸ್ಥೆಯ ವತಿಯಿಂದ  ಗ್ರಾಮೀಣ ಆಟಗಳಿಗೆ ಸಂಬಂಧಿಸಿದಂತೆ ಉಪಕರಣಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

babu/km